# <u>ಸಣ್ಣವನ ಮತವಲ್ಲ ಸಾರಿ ಹೇಳಮ್ಮ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 67.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 546.
3. **Note:** Lyrics given without highlights are as per Ref. 1. Lyrics given in yellow highlights are as per Ref. 2. Wordings are slightly different in these versions.

| | |
|---|---|
| ರಾಗ: ಸಾರಂಗ ತಾಳ: ಅಟ | ರಾಗ: ದೇಶಿ ತಾಳ: ಅಟ |
| | |
| ಸಣ್ಣವನ ಮತವಲ್ಲ ಸಾರಿ ಹೇಳಮ್ಮ | ಸಣ್ಣವ ನಮ್ಮಾತು ಒಲ್ಲ ಸಾರಿ ಹೇಳಮ್ಮ |
| ಕಣ್ಣ ಮುಚ್ಚಿ ಆಡುವಾಗ ಕಾಕು ಮಾಡಲೇತಕಮ್ಮ ‖ ಪ ‖ | ಕಣ್ಣು ಮುಚ್ಚಲಾಡುವಾಗ ಕಾಕು ಮಾಡಲ್ಯಾತಕಮ್ಮ |
| | |
| ಮೊಸರ ಕದ್ದರೆ ನಾವು ಮೊರೆಯಿಡ ಬಂದುದಿಲ್ಲ | ಮೊಸರ ಕದ್ದರೆ ನಾವು ಮೊರೆಯಿಡ ಬಂದುದಿಲ್ಲ |
| ಪೊಸ ಕುಚಗಳ ಮುಟ್ಟಿ ಪೊಗಲೀಸನಮ್ಮ | ಹೊಸ ಕುಚನಗಳ ಮುಟ್ಟಿ ಪೋದನಲ್ಲೆ |
| ಹಸುಮಗನರಿಯದೆ ಆವಾಗಲೂ ಪಿಡಿವ | ಹಸು ಮಗನರಿಯದೆ ಅವನು ಆಗಲಿ ಮೆಲುವ |
| ಬಿಸರುಹ ಮೊಗ್ಗೆಯೆಂದು ಪಿಡಿದಡೇನಾಯ್ತಮ್ಮ ‖ 1 ‖ | ಬಿಸುರುಹ ಮೊಗ್ಗೆಯೆಂದು ಪಿಡಿದರೇನಾಯಿತೆ |
| | |
| ನವನೀತ ಬೇಡಿದರೆ ನಾವೇನೆಂಬುದಿಲ್ಲ | ನವನೀತವನು ಬೇಡೆ ನಾವೇನೆಂದುದಿಲ್ಲವಮ್ಮ |
| ಯುವತಿಯರಧರವ ಬೇಡಬೇಕೆ ? | ಯುವತಿಯನುದರದಿ ಕಟ್ಟಿರಬೇಡ |
| ಅವನಾವಾಗಲೂ ಮೆಲ್ವ ಆಲದ ಪಣ್ಣೆಂದು | ಅವನು ಆಗಲಿ ಮೆಲುವ ಆಲದ ಹಣ್ಣೆಂದು |
| ಸವಿಗಂಡು ಬೇಡಿದರೆ ಸಾಧಿಸಲೇತಕಮ್ಮ ‖ 2 ‖ | ಸವಿ ಕಂಡು ಬೇಡಿದರೆ ಅದಕೆ ಸಾಧಿಸ ಬಂದು |
| | |
| ಭೂಮಿಗೆ ಲಂಡನು ನಮ್ಮ ಪುರುಷರಿಲ್ಲದ ವೇಳೆ | ಭೂಮಿಗೆ ಲಂಡನು ನಮ್ಮ ಪುರುಷರಿಲ್ಲದ ಹಿಂದೆ |
| ಕಾಮಿಸಿ ಗಂಡನಂದದಿ ಕರೆಯುತ್ತೈದಾನೆ | ಕಾಮಿಸಿ ಗಂಡನ ಹಾಗೆ ಕರವುತ್ತೈದಾರೆ |
| ಪ್ರೇಮದಿ ಪುರಂದರ ವಿಠಲನ ನೆನೆದರೆ | ಪ್ರೇಮದಿಂ ಪುರಂದರ ವಿಠ್ಠಲನ್ನ ನೆನೆದರೆ |
| ಕಾಮಿನಿಯರಿಗೆ ಕಲ್ಪವೃಕ್ಷ ಕೈಸೇರುವಂತೆ ‖ 3 ‖ | ಕಾಮಿತ ಕಲ್ಪವೃಕ್ಷವು ಕೈ ಸೇರಿತೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮತ್ತೊಬ್ಬಳು ಗೋವಳಿತಿ ದೂರಿದ ಮಾತಿಗೆ ಯಶೋದೆ ಸಮಾಧಾನ ಹೇಳಿದ ಮಾತುಗಳು ಈ ಹಾಡಿನಲ್ಲಿವೆ.

**ಕಾಕು** = ಕಿಡಿಗೇಡಿತನ

**ಬಿಸರುಹ** = ಕಮಲ

**ಸಾಧಿಸು** = ಹಠಹಿಡಿ

**ಲಂಡ** = ನೀಚ, ಕ್ಷುದ್ರ, ಜಗಳಗಂಟ, ಮೊಂಡವಾದ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** padma, kannu, kai, koosu, benne, gopi, hennu, bhumi, pati, prema, kalpavruksha
**Pravachana:** NA
**Explanation:** NA